289 (836) ಶ್ರೀ ಅಂಜನಾ ಮೂರ್ತಿ (ನೆಲಮಂಗಲ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು 2006–07ರ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ನಿಗದಿ ಮಾಡಿದ ಮತ್ತು ಬಿಡುಗಡೆ ಮಾಡಿದ ಹಣವೆಷ್ಟು,

ಆ) ಬಿಡುಗಡೆಯಾದ ಹಣದಲ್ಲಿ ಶೇ 18ರಷ್ಟು ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ವಾಸಿಸುವ ಹಳ್ಳಿಗಾಡಿನ ಯಾವ ಯಾವ ರಸ್ತೆ ಕಾಮಗಾರಿಗಳನ್ನು ಹಾಗೂ ಇನ್ನಿತರೇ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ? ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) .

2006–07ರ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ನಿಗದಿ ಮಾಡಿದ ಮತ್ತು ಬಿಡುಗಡೆ ಮಾಡಿದ ಹಣದ ವಿವರ,

ಲೆಕ್ಕ ಶೀರ್ಷಿಕೆ	ನಿಗದಿಪಡಿಸಿದ ಅನುದಾನ	ಆರ್ಥಿಕ ಇಲಾಖೆಯಿಂದ ಬಿಡುಗಡೆಯಾದ ಹ ಭ ಪತ್ರ
ಅ ಕಟ್ಟಡಗಳು (ಯೋಜನೆ		
2059 ಯೋಜನೆ	400 00	128 00
2216 ಯೋಜನೆ	400 00	118 70
4059 ಲೋಇ ಯೋಜನೆ	8633 00	6690 58
4059 ಉಚ್ಚ ನ್ಯಾಯಾಲಯ ಸಂಚಾರಿ ಪೀಠ	3945 00	500 00
4216 ವಸತಿ	1560 00	521 69
ಒಟ್ಟು	14938 00	7958 97
ಆ ರಸ್ತೆ ಮತ್ತು ಸೇತುವೆ		
5054 ರಸ್ತೆ ಮತ್ತು ಸೇತುವೆ (ORF)	6066 00	4701 15
5054 ತುರ್ತು ಕಾಮಗಾರಿಗಳು & ಭೂಸ್ವಾಧೀನ	2050 00	1787 62

5054 ಬೆಂಗಳೂರು ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ	20000 00	896130
5054 NABARD	13500 00	13499 790
5054 ಸಕ್ಕರೆ ಕಾರ್ಖಾನೆ ರಸ್ತೆಗಳು	47 00	32 78
3054 ಯೋಜನೆ (ಮುಮಂಗ್ರಾರನಿ)	28271 00	21910 02
ಒಟ್ಟು	69934 00	50892 74
ಇ ಕಟ್ಟಡಗಳು –ಯೋಜನೇತರ		
2059 ಲೋಇ ಕಾಮಗಾರಿಗಳು	10312 00	7982 62
2059 (12ನೇ ಹಣಕಾಸು ಯೋಜನೆ)	1320 00	60 75
2216 ವಸತಿ	3984 00	3087 60
2216 ಪೀರೋಪಕರಣ	473 00	322 04
ಒಟ್ಟು	16089 00	11453 01
ಈ ರಸ್ತೆ ಮತ್ತು ಸೇತುವೆ (ಯೋಜನೇತರ)		
3054 ಯೋಜನೇತರ (12ನೇ ಹಣಕಾಸು)	14615 00	3420 70
5054 ಸಿಆರ್‌ಎಫ್	15000 00	4800 00
ಒಟ್ಟು	29615 00	8220 07
ಕೇಷಿಪ್	56300 00	42000
ಒಟ್ಟು	186876 00	120524

ಆ) ಲೋಕೋಪಯೋಗಿ ಇಲಾಖೆಯಿಂದ ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ರಾಜ್ಯ ಹೆದ್ದಾರಿಗಳ ದುರಸ್ತಿ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೈಗೊಳ್ಳುತ್ತಿದ್ದು, ಹಳ್ಳಿಗಾಡಿನ ರಸ್ತೆಗಳು ಇಲಾಖಾ ವ್ಯಾಪ್ತಿಗೊಳಪಡುವುದಿಲ್ಲ

290 (837) ಶ್ರೀ ಅಂಜನಾ ಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆಯಡಿಯಲ್ಲಿ ಸಾವಿರಾರು ಬಡ ಜನತೆಗೆ ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉಚಿತ ವಿದ್ಯುತ್ ಸೌಕರ್ಯ